ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ,ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು-09

ಸಂಖ್ಯೆ:ಸಿಎಸಿ-05/ಬಿ.ಇಡಿ.ದಾ./01/2022-23 ದಿನಾಂಕ:13-01-2023

## 2022-23ನೇ ಸಾಲಿನ ಬಿ.ಇಡಿ ಕೋರ್ಸಿನ ಎರಡನೇ ಸುತ್ತಿನ ದಾಖಲಾತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸೂಚನೆಗಳು

2022-23ನೇ ಸಾಲಿನ ಬಿ.ಇಡಿ ಕೋರ್ಸಿಗೆ ದಾಖಲಾತಿ ಬಯಸಿ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ನೀಡಿರುವ ಮಾಹಿತಿಯ ಆಧಾರದ ಮೇಲೆ ಮೆರಿಟ್, ಮೀಸಲಾತಿ ಮತ್ತು ಆದ್ಯತೆಯ ಅನ್ವಯ ಬಿ.ಇಡಿ ಸಂಸ್ಥೆ/ಕಾಲೇಜು ಹಂಚಿಕೆ ಸಹಿತ ಆಯ್ಕೆ ಪಟ್ಟಿ, ಅರ್ಹತಾ ಪಟ್ಟಿ ಮತ್ತು ತಿರಸ್ಕೃತ ಪಟ್ಟಿ ಹಾಗೂ ಅಭ್ಯರ್ಥಿಗಳ ರ‍್ಯಾಂಕ್ ಪಟ್ಟಿಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ದಿನಾಂಕ:06-01-2023 ರಂದು ಪ್ರಕಟಿಸಲಾಗಿತ್ತು.

ವೇಳಾಪಟ್ಟಿಯಂತೆ ದಿನಾಂಕ:13-01-2023 ರಂದು ಮೊದಲ ಸುತ್ತಿನ ದಾಖಲಾತಿ ಪ್ರಕ್ರಿಯೆ ಮುಗಿದ ನಂತರ ಉಳಿದಿರುವ ಸೀಟುಗಳನ್ನು ಪರಿಗಣಿಸಿ, ಸಂಸ್ಥೆಯವಾರು ಪ್ರವರ್ಗವಾರು [Institution wise remaining seats (category wise)] Seat Matrix ಅನ್ನು ವೆಬ್‌ಸೈಟ್ https://schooleducation.kar.nic.inನಲ್ಲಿ ಪ್ರಕಟಿಸಲಾಗಿದೆ.

ದಿನಾಂಕ:06-01-2023 ರಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾದ ಆಯ್ಕೆಪಟ್ಟಿ/ ಅರ್ಹತಾ ಪಟ್ಟಿ/ತಿರಸ್ಕೃತ ಪಟ್ಟಿಯಲ್ಲಿನ ಅಭ್ಯರ್ಥಿಗಳು ಆಕ್ಷೇಪಣೆಗಳಿದ್ದಲ್ಲಿ ಸೂಕ್ತದಾಖಲೆಗಳೊಂದಿಗೆ (DIET/CTE) ಸಲ್ಲಿಸಲು ದಿನಾಂಕ:07-01-2023 ರಿಂದ 11-01-2023 ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಅಭ್ಯರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ, ದತ್ತಾಂಶದಲ್ಲಿ ಇಂದೀಕರಿಸಲಾಗಿದೆ. ಇನ್ನು ಮುಂದೆ ಅಭ್ಯರ್ಥಿಗಳು ಆಕ್ಷೇಪಣೆ ಸಲ್ಲಿಸಲು ಅವಕಾಶವಿರುವುದಿಲ್ಲ.

**ದಿನಾಂಕ:06-01-2023 ರಂದು ಆಯ್ಕೆಪಟ್ಟಿಯಲ್ಲಿ ಕಾಲೇಜು ಸಹಿತ ಸೀಟು ಹಂಚಿಕೆಯಾಗಿ, ಹಂಚಿಕೆಯಾದ ಕಾಲೇಜಿಗೆ ದಾಖಲಾಗಲು ಇಚ್ಛಿಸದೇ ಮರುಹಂಚಿಕೆ ಬಯಸಿರುವ ಅಭ್ಯರ್ಥಿಗಳಿಗೆ,** ಆಯ್ಕೆಪಟ್ಟಿಯಲ್ಲಿ ಹೆಸರಿದ್ದು, ಕಾಲೇಜು ಹಂಚಿಕೆಯಾಗದೇ ಆಯ್ಕೆಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರಿನ ಮುಂದೆ ** ಚಿಹ್ನೆಯನ್ನು ನಮೂದಿಸಲಾಗಿದ್ದ ಅಭ್ಯರ್ಥಿಗಳಿಗೆ ಹಾಗೂ **ಆಕ್ಷೇಪಣೆ ಸಲ್ಲಿಸಿ, ಕಟ್‌ಆಫ್ ಮೆರಿಟ್‌ಗಿಂತ ಹೆಚ್ಚಿನ ಮೆರಿಟ್ ಹೊಂದಿರುವ ಅಭ್ಯರ್ಥಿಗಳಿಗೆ** ಮರು **ಆದ್ಯತೆ** *(Option Entry)* **ನೀಡಲು ಅವಕಾಶ ನೀಡಲಾಗಿದೆ. ಅಂತಹ ಅಭ್ಯರ್ಥಿಗಳು** ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ Seat Matrix ಅನ್ನು ಪರಿಶೀಲಿಸಿ, ನಿಮ್ಮ User ID ಮತ್ತು Password ಮೂಲಕ ಮತ್ತೊಮ್ಮೆ ಲಾಗಿನ್ ಆಗಿ ಆನ್‌ಲೈನ್ ಅರ್ಜಿಯಲ್ಲಿ ದಿನಾಂಕ:14-01-2023 ಮತ್ತು 15-01-2023 ಈ ಎರಡು ದಿನಗಳಲ್ಲಿ ಕಾಲೇಜು/ಸಂಸ್ಥೆಯ ಮರುಆದ್ಯತೆಯನ್ನು (*Option Entry*/Institution choice) *ಕಡ್ಡಾಯವಾಗಿ* ನಮೂದಿಸುವುದು. **ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ**

ಇದು ಅಂತಿಮ ಅವಕಾಶವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ತಮ್ಮ ಮೆರಿಟ್ ಮತ್ತು ರೋಸ್ಟರ್ ಅನ್ವಯ ಪ್ರಕಟಿಸಲಾದ Seat Matrix ನಂತೆ ಸೀಟು ಲಭ್ಯವಿರುವ ಕಾಲೇಜುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮರು ಆದ್ಯತೆಯನ್ನು ನೀಡುವುದು. ಕಡಿಮೆ ಸಂಖ್ಯೆಯ ಕಾಲೇಜುಗಳಿಗೆ ಆದ್ಯತೆ ನೀಡಿ ಕಾಲೇಜು ಹಂಚಿಕೆಯಾಗದಿದ್ದಲ್ಲಿ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ.

**ಎರಡನೇ ಸುತ್ತಿನ ದಾಖಲಾತಿಗೆ ಸೀಟು ಹಂಚಿಕೆ ಬಯಸಿ, ಕಾಲೇಜುಗಳಿಗೆ ಮರುಆದ್ಯತೆ ನೀಡುವ ಅಭ್ಯರ್ಥಿಗಳು ಗಮನಿಸಬೇಕಾದ ಅಂಶಗಳು**

1. ದಿನಾಂಕ:06-01-2023 ರಂದು ಪ್ರಕಟಿಸಲಾದ ಆಯ್ಕೆಪಟ್ಟಿಯಲ್ಲಿನ **ಅಭ್ಯರ್ಥಿಗಳಿಗೆ ಮೊದಲೆರಡು ಸುತ್ತಿನ ದಾಖಲಾತಿ ಪ್ರಕ್ರಿಯೆಗೆ ಮಾತ್ರ ಅವಕಾಶವಿರುತ್ತದೆ. ಮೂರನೇ ಸುತ್ತಿನ ಅಥವಾ ನಂತರದ ದಾಖಲಾತಿ ಪ್ರಕ್ರಿಯೆಗೆ ಅವಕಾಶವಿರುವುದಿಲ್ಲ.**

2. ಕೆಲವು ಅಭ್ಯರ್ಥಿಗಳು ಹೆಚ್ಚಿನ ಮೆರಿಟ್ ಹೊಂದಿರುತ್ತಾರೆ ಆದರೆ ಕಾಲೇಜಿಗೆ ಆದ್ಯತೆ ನೀಡುವಾಗ ತಾನು ದಾಖಲಾತಿ ಬಯಸುವ ಕಾಲೇಜುಗಳನ್ನು ಕ್ರಮಾನುಗತವಾಗಿ ನೀಡದೇ ಅಂದಾಜಿನ ಆಧಾರದಲ್ಲಿ ನೀಡಿರುತ್ತಾರೆ.

   **ಉದಾಹರಣೆ:-** ಹೆಚ್ಚಿನ ಮೆರಿಟ್ ಹೊಂದಿರುವ ಒಬ್ಬ ಅಭ್ಯರ್ಥಿಯು X ಕಾಲೇಜಿಗೆ ದಾಖಲಾತಿ ಬಯಸಿರುತ್ತಾನೆ. ಆದರೆ ಮೊದಲ ಆದ್ಯತೆಯಾಗಿ Y ಕಾಲೇಜಿಗೆ ನೀಡಿ ಅನಂತರ X ಕಾಲೇಜಿಗೆ ಆದ್ಯತೆ ನೀಡಿರುತ್ತಾನೆ. ಇದರಿಂದ ಅವನಿಗೆ ಮೆರಿಟ್ ಮತ್ತು ರೋಸ್ಟರ್ ಅನ್ವಯ X ಕಾಲೇಜಿನಲ್ಲಿ ಸೀಟು ಸಿಗುವ ಅವಕಾಶವಿದ್ದರೂ ಸಿಗುವುದಿಲ್ಲ. ಆದರೆ ಈತನ ಮೆರಿಟ್ ಮತ್ತು ರೋಸ್ಟರ್‌ಗೆ Y ಕಾಲೇಜಿನಲ್ಲಿ ಸೀಟು ದೊರೆಯುವುದಿಲ್ಲ. ಕಾರಣ ಈತನಿಗಿಂತ ಹೆಚ್ಚು ಮೆರಿಟ್ ಇರುವ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ Y ಕಾಲೇಜಿಗೆ Option Entry /Institution Choice ಆದ್ಯತೆ ನೀಡಿರುತ್ತಾರೆ.

3. ಕೆಲವು ಅಭ್ಯರ್ಥಿಗಳು ಕಡಿಮೆ ಸಂಖ್ಯೆಯ ಕಾಲೇಜಿಗಳಿಗೆ ಆದ್ಯತೆ ನೀಡಿರುತ್ತಾರೆ. ಇದರಿಂದ ಅಭ್ಯರ್ಥಿಗೆ ಮೊದಲ ಹಂತದ ಆಯ್ಕೆಪಟ್ಟಿಯಲ್ಲಿ ಸೀಟು ಹಂಚಿಕೆಯಾಗಿರುವುದಿಲ್ಲ. ಇದರಿಂದ ಅಂತಹ ಅಭ್ಯರ್ಥಿಗೆ ಮೊದಲ ಹಂತದಲ್ಲಿ ತಾನು ಬಯಸುವ ಕಾಲೇಜಿಗೆ ಮೆರಿಟ್ ಮತ್ತು ರೋಸ್ಟರ್ ಅನ್ವಯ ಸೀಟು ಸಿಗುವ ಅವಕಾಶವಿದ್ದರೂ ಮತ್ತೊಬ್ಬ ಅಭ್ಯರ್ಥಿಗೆ ಆ ಕಾಲೇಜಿನಲ್ಲಿ ಸೀಟು ಹಂಚಿಕೆಯಾಗಿರುತ್ತದೆ.

4. ಹೆಚ್ಚಿನ ಮಾಹಿತಿಗಾಗಿ ದಿನಾಂಕ:05-01-2023 ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ **"2022-23ನೇ ಸಾಲಿನ ಬಿ.ಇಡಿ ಕೋರ್ಸಿನ ಎರಡನೇ ಸುತ್ತಿನ ದಾಖಲಾತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸೂಚನೆಗಳು"** ಇದನ್ನು ಗಮನಿಸುವುದು.

ಸಹಿ/-

ವಿಶೇಷಾಧಿಕಾರಿ